ಕಳೆದ ಮೂರು ವರ್ಷಗಳಲ್ಲಿ ಸತತ ಬರಗಾಲದಿಂದಾಗಿ ಸರಬರಾಜಾದ ಸಾಮಗ್ರಿ ಹೆಚ್ಚಿನ ಭಾಗವನ್ನು ಕುಡಿಯುವ ನೀರಿನ ಕಾಮಗಾರಿಗಳಿಗೆ ವಿನಿಯೋಗಿಸಿದ್ದರಿಂದ ಮೇಲಿನ ಕೆಲಸಗಳನ್ನು ಪೂರ್ಣಗೊಳಿಸಲಾಗಲಿಲ್ಲ. ಈ ಅವಧಿಯಲ್ಲಿ ಈ ತಾಲ್ಲೂಕಿನಲ್ಲಿ ಒಟ್ಟು 136 ಕುಡಿಯುವ ನೀರಿನ ಯೋಜನೆಗಳಿಗೆ ಸಂಪರ್ಕ ನೀಡಲಾಗಿದೆ.

ಆ) ಬೇಕಾಗಿರುವ ಸಾಮಗ್ರಿಗಳನ್ನು ಆದಷ್ಟು ಶೀಘ್ರರೀತಿಯಲ್ಲಿ ಪೂರೈಕೆ ಮಾಡಿ ಕೈಗೆತ್ತಿಕೊಳ್ಳಬೇಕಾಗಿರುವ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

761(728) ಶ್ರೀ ಕೃಷ್ಣಪ್ಪ ಎಂ.ಟಿ.(ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಇರುವ ಒಟ್ಟು ದೇವಸ್ಥಾನಗಳೆಷ್ಟು; ಆ ಪೈಕಿ ಮುಜರಾಯಿ ಇಲಾಖೆಗಳಿಗೆ ಒಳಪಟ್ಟಿರುವ ದೇವಸ್ಥನಗಳೆಷ್ಟು ;

ಆ) ಯಾವ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಕಳೆದ ಮೂರು ವರ್ಷಗಳಿಂದ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ;

ಇ) ಮುಜರಾಯಿ ಇಲಾಖೆಗೆ ಒಳಪಡದ ಎಲ್ಲಾ ದೇವಸ್ಥಾನಗಳನ್ನು ಇಲಾಖೆ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗುವುದೆ ?

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು) :

ಅ) ತುಮಕೂರು ಜಿಲ್ಲೆ, ತರುವೇಕೆರೆ ತಾಲ್ಲೂಕಿನಲ್ಲಿ ಧಾರ್ಮಿಕದತ್ತಿ ಇಲಾಖೆಯ ಆಡಳಿತಕ್ಕೊಳಪಟ್ಟು 415 ಅಧಿಸೂಚಿತ ಸಂಸ್ಥೆಗಳು ಇರುತ್ತವೆ. ಮುಜರಾಯಿ ಇಲಾಖೆಯ ಆಡಳಿತ ವ್ಯಾಪ್ತಿಗೆ ಬಾರದಿರುವ ಖಾಸಗಿ ದೇವಾಲಯಗಳ ಮಾಹಿತಿ ಇರುವುದಿಲ್ಲ.

ಆ) ಕಳೆದ 3 ವರ್ಷಗಳಲ್ಲಿ ದೇವಸ್ಥಾನಗಳ ದುರಸ್ಥಿ/ಜೀರ್ಣೋದ್ಧಾರ/ನಿರ್ಮಾಣಗಳಿಗೆ ತುರುವೇಕೆರೆ ತಾಲ್ಲೂಕಿಗೆ ಸರ್ಕಾರದಿಂದ ಮಂಜೂರಾದ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ:-

2001–2002–10 ಸಂಸ್ಥೆಗಳು	ರೂ.1.50 ಲಕ್ಷಗಳು
2002–2003–6 ಸಂಸ್ಥೆಗಳು	ರೂ.1.75 ಲಕ್ಷಗಳು
2003–2004–3 ಸಂಸ್ಥೆಗಳು	ರೂ.0.65 ಲಕ್ಷಗಳು

ದೇವಾಲಯಗಳ ವಿವರ ಲಗತ್ತಿಸಿದೆ.

ಇ) ಇಲಾಖೆಯ ಆಡಳಿತ ವ್ಯಾಪ್ತಿಗೆ ಬಾರದಿರುವ ಖಾಸಗಿ ದೇವಾಲಯಗಳ ಆಡಳಿತ ನಿರ್ವಹಣೆ ಬಗ್ಗೆ ದೂರುಗಳು ಬಂದಲ್ಲಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಕಾಯ್ದೆಯ ಸೆಕ್ಷನ್ 42ರ ಪ್ರಕಾರ ಗರಿಷ್ಟ 5 ವರ್ಷಗಳ ಅವಧಿಗೆ ಇಲಾಖೆಯ ಆಡಳಿತ ವ್ಯಾಪ್ತಿಗೆ ಸೇರಿಸಿಕೊಳ್ಳಲು ಅವಕಾಶ ಇರುತ್ತದೆ .

ತುರುವೇಕೆರೆ (ತಾ) ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಿದ ವಿವರ

2001-2002ನೇ ಸಾಲಿನಲ್ಲಿ

	ಧಾರ್ಮಿಕ ಸಂಸ್ಥೆಯ ಹೆಸರು	ಮಂಜೂರಾದ ಅನುದಾನ
1)	ಶ್ರೀ ಲಕ್ಷ್ಮೀ ದೇವರ ದೇ, ಕಸಬಾ(ಹೋ)ಬಾಣಸಂದ್ರ	20,000-00
2)	ಶ್ರೀ ಆಂಜನೇಯ ಸ್ವಾಮಿ ದೇ, ಬಾಣಸಂದ್ರ	20,000-00
3)	ಶ್ರೀ ಕೋಡಿರಂಗನಾಥ ದೇ, ಮೂಡಿಗೆರೆ ಮಜರೆ ಕೋಡಿಪುರ	10,000-00
4)	ಶ್ರೀ ಆಂಜನೇಯ ಸ್ವಾಮೀ ದೇ, ಚಂದ್ರಾಪುರ	30,000-00
5)	ಶ್ರೀ ಬೃಂದಾವನ ದೇ, ಲೋಕಮ್ಮನ ಹಳ್ಳಿ	10,000-00
6)	ಶ್ರೀ ಬಸವೇಶ್ವರ ದೇ, ಮಾದಾಪಟ್ಟಣ	10,000-00
7)	ಶ್ರೀ ರಂಗನಾಥ ಸ್ವಾಮಿ ದೇ, ಅರೆಮಲ್ಲನಹಳ್ಳಿ	10,000-00
8)	ಶ್ರೀ ಕೋಡಿರಾಮೇಶ್ವರ ದೇ, ಮಾಚೇನಹಳ್ಳಿ	10,000-00
9)	ಶ್ರೀ ಆಂಜನೇಯಸ್ವಾಮಿ ದೇ, ಮಾಚೇನಹಳ್ಳಿ	10,000-00
10)	ಶ್ರೀ ಕೆಂಪಮ್ಮ ದೇ, ಮುತ್ತುಗದಹಳ್ಳಿ	20,000-00
	ಒಟ್ಟು	**1,50,000-00**

2002-03ನೇ ಸಾಲಿನಲ್ಲಿ

1)	ಶ್ರೀ ಹುಚ್ಚಮ್ಮ ದೇ ಗುಡ್ಡೇನಹಳ್ಳಿ ಗ್ರಾಮ	40,000-00
2)	ಶ್ರೀ ಆಂಜನೇಯ ಸ್ವಾಮಿ ದೇ, ಕೋಳಾಲ ತುರುವೇಕೆರೆ ಕ್ಷೇತ್ರ	50,000-00
3)	ಶ್ರೀ ಕೊಲ್ಲಾಪುರದಮ್ಮ ದೇ ಮಾಯಸಂದ್ರ	20,000-00
4)	ಶ್ರೀ ಆಂಜನೇಯಸ್ವಾಮಿ ದೇ, ಮಂಚೇನಹಳ್ಳಿ	20,000-00
5)	ಶ್ರೀ ಬಸವೇಶ್ವರ ದೇ, ತಾಳೆಕೆರೆ	20,000-00
6)	ಶ್ರೀ ಚಿಕ್ಕಮ್ಮ ದೊಡ್ಡಮ್ಮ ದೇ, ಗೊಟ್ಟಕೆರೆ	25,000-00
	ಒಟ್ಟು	**1,75,000-00**

2003-04ನೇ ಸಾಲಿನಲ್ಲಿ

1)	ಶ್ರೀ ಕೋಡಿರಂಗನಾಥ ಸ್ವಾಮಿ ದೇ, ಮೂಡಿಗೆರೆ ಮಜರೆ ಕೋಡಿಪುರ	20,000-00
2)	ಶ್ರೀ ಈಶ್ವರ ಸ್ವಾಮಿ(ಮಲ್ಲೇದೇವರು)ದೇ, ಮಾವಿನಕೆರೆ	25,000-00
3)	ಶ್ರೀ ಆಂಜನೇಯ ಸ್ವಾಮಿ ದೇ, ಕೆ.ಬೇವಿನಹಳ್ಳಿ ದಬ್ಬೆಘಟ್ಟ (ಹೋಬಳಿ)	20,000-00
	ಒಟ್ಟು	**65,000-00**